**ಸಾಕ್ಷಿಯನ್ನು ದಿಃ 12.06.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತವಾದ 5 ನಿಮಿಷಕ್ಕೆ ನಾನು ಸ್ಥಳಕ್ಕೆ ಹೋಗಿದ್ದೇನೆ. ಅಪಘಾತವನ್ನು ನಾನು 50-60 ಮೀ ದೂರದಿಂದ ನೋಡಿದ್ದೇನೆ. ಅಪಘಾತ ರಸ್ತೆ ಬಿಟ್ಟು ಮಣ್ಣಿನ ರಸ್ತೆಯಲ್ಲಿ ಆಗಿದೆ. ಆಗ ಸಮಯ 7.30 ಗಂಟೆಯಾಗಿತ್ತು. ಅಪಘಾತಪಡಿಸಿದ ವಾಹನ ಪ್ಯಾಸೆಂಜರ್ 6470 ನಂಬರಿನ ಆಟೋ ಆಗಿತ್ತು. ಪೊಲೀಸ್ ಠಾಣೆಗೆ ನಾನು ಹೋಗಿಲ್ಲ. ಪೊಲೀಸರೇ ಬಂದು ನನ್ನನ್ನು ವಿಚಾರಿಸಿದ್ದಾರೆ. ನಾನು ಒಂದು ವಾರದ ನಂತರ ಠಾಣೆಗೂ ಹೋಗಿದ್ದೇನೆ. ನನ್ನ ಟೀ ಅಂಗಡಿಗೆ ಬಂದು ಮೊದಲಿಗೆ ವಿಚಾರಿಸಿದ್ದಾರೆ. ಪೊಲೀಸರು ಅಪಘಾತವಾದ ಮರುದಿನ ನನ್ನ ಹೇಳಿಕೆ ಪಡೆದಿದ್ದಾರೆ. ಒಂದು ವಾರದ ನಂತರ ಠಾಣೆಗೆ ಹೋಗಿದ್ದೇನೆ. ನಾನು ಹೇಳಿದ್ದನ್ನು ಪೊಲೀಸರು ಬರೆದುಕೊಂಡಿದ್ದಾರೆ. ಅಪಘಾತದ ರಸ್ತೆ 18-20 ಅಡಿ ಅಗಲವಿತ್ತು. ನಕ್ಷೆ ಪ್ರಕಾರ ಅಪಘಾತದ ಸ್ಥಳಕ್ಕೆ ನನ್ನ ಟೀ ಅಂಗಡಿ 30 ಅಡಿ ದೂರವಿದೆ ಎಂದರೆ ನನ್ನಿಂದ ಹೇಳಲಾಗುವುದಿಲ್ಲ, ನನ್ನ ಟೀ ಅಂಗಡಿಯ ಎದುರು ಬದಿಯಲ್ಲಿ ಟಾರ್ ರಸ್ತೆ ಇದ್ದು, ಅದರ ಎದುರು ಬದಿಯಲ್ಲಿ ಆಗಿದೆ ಎನ್ನುತ್ತಾರೆ. ರಸ್ತೆಯ ಎರಡೂ ಬದಿಯಲ್ಲಿ ಫುಟ್ ಪಾತ್ ಇದೆ ಎಂದರೆ ಸರಿ.

ನಕ್ಷೆಯ ಪ್ರಕಾರ ಅಪಘಾತ ಟಾರ್ ರಸ್ತೆಯಲ್ಲಿ ಆಗಿದೆ ಎಂದರೆ ಸರಿಯಲ್ಲ, ಸದರಿ ವ್ಯಕ್ತಿ ಮಣ್ಣು ರಸ್ತೆಯಲ್ಲಿ ಬರುತ್ತಿದ್ದು, ವಾಹನ ಡಿಕ್ಕಿಪಡಿಸಿದ ನಂತರ ಟಾರ್ ರಸ್ತೆಯಲ್ಲಿ ಬಿದ್ದಿದ್ದಾರೆ ಎನ್ನುತ್ತಾರೆ. ನಾನು ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ, ಅಪಘಾತದ ಸ್ಥಳದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.